ಶ್ರೀ ಕೋಣಂದೂರು ಲಿಂಗಪ್ಪ.—ಅವರು ಅಲ್ಲಿ ಗೂಂಡಾಗಳನ್ನು ತಂದು ಧಾಂಧಲೆ ಮಾಡಿಸುತ್ತಿದ್ದಾರೆ.....

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ನಗರದಲ್ಲಿ ಪೋಲೀಸಿನವರ ದೌರ್ಜನ್ಯದ ಬಗ್ಗೆ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಕಾಣುತ್ತಿದೆ.

ಅಧ್ಯಕ್ಷರು : ಅದನ್ನು ನಾನು ಪರಿಶೀಲನೆ ಮಾಡಿ ನೋಡುತ್ತೇನೆಂದು ಹೇಳಿದ ಮೇಲೆ ಸಾಲದೆ ?

ಶ್ರೀ ಟಿ. ಎಂ. ಮಂಜುನಾಥ್.—ಇನ್ನು ಅಧ್ಯಕ್ಷರೆ, ಸರ್ಕಾರದವರು ರಾಜ್ಯದಲ್ಲಿ ಕುಡಿಯುವ ನೀರಿನ ಬಾವಿಗಳ ಬಗ್ಗೆ ಒಂದು ಸ್ಟೇಟ್‌ಮೆಂಟನ್ನು ಹೊರಡಿಸಿದ್ದಾರೆ.....

ಅಧ್ಯಕ್ಷರು :—ಈಗ ಸರ್ಕಾರದವರು ಒಂದು ಸ್ಟೇಟ್‌ಮೆಂಟನ್ನು ಮಾಡುವವರಿದ್ದಾರೆ. ಅದಾಗಲಿ ಮೊದಲು.

ಶ್ರೀ ಎನ್. ಎಸ್. ಗುರಿಸಿದ್ದಪ್ಪ.—ಮಾನ್ಯ ಅಧ್ಯಕ್ಷರೇ : ನಾನು ತಮಗೆ..... ...

ಅಧ್ಯಕ್ಷರು.—ಮಾನ್ಯ ಗುರುಸಿದ್ದಪ್ಪನವರಿಗೂ ಅಷ್ಟೇ. ಅವರೂ ಕೂಡ ದಯಮಾಡಿ ನನ್ನ ಛೇಂಬರಿಗೆ ಬರಬೇಕು. ಫೈಲನ್ನು ತರಿಸಿ ನೋಡಿ ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ : ತಮ್ಮ ಗಮನಕ್ಕೆ ತರಬೇಕಾದ ಇನ್ನೊಂದು ಬಹಳ ಪ್ರಾಮುಖ್ಯವಾದ ವಿಚಾರವಿದೆ. ಅದೇನೆಂದರೆ ಸರ್ಕಾರದವರು ನಮ್ಮ ಮೇಲೆ ನಾಡಿನ ರೈತರೇನಾದರೂ ಒಂದು ಗೇಣು ಭೂಮಿಯನ್ನು ಆಕ್ರಮಿಸಿಕೊಂಡರೆ ಸರ್ಕಾರದವರು ಅವರನ್ನು ಅಕ್ರಮ ಸಾಗುವಳಿದಾರ ಎಂದು ಹೇಳಿ ಹೊರಗೆ ಹಾಕುತ್ತಿದ್ದಾರೆ. ಆದರೆ ಈ ದಿವಸ ಸರ್ಕಾರ ಅಧಿಕಾರಿಗಳೇ ಸೇರಿಕೊಂಡು ಲಕ್ಷಾಂತರ ರೂಪಾಯಿಗಳ ನಾಟವನ್ನು ಇಂದಿರಾ ರೈಲಿನಲ್ಲಿ ಬಹಿರಂಗವಾಗಿ ಸಾಗಿಸಿ ಮಾರಾಟ ಮಾಡುತ್ತಿದ್ದಾರೆ; ಇಷ್ಟು ಬಹಿರಂಗವಾಗಿ ಅವರು ಕಳವಿನಿಂದ ನಾಟಾ ಕಳುಹಿಸುತ್ತಿದ್ದರೂ ಅದನ್ನು ತಡೆಯುವುದಕ್ಕೆ ಶಕ್ತಿ ಇಲ್ಲದ ಸರ್ಕಾರ ಅಡಳಿತದಲ್ಲಿದೆ.....

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳುತ್ತಿರುವಂತೆ 'ಇಂದಿರಾ ರೈಲು' ಅನ್ನುವುದೂ ಒಂದಿದ್ದರೆ ಇವರು ಹೇಳುತ್ತಿರುವುದೆಲ್ಲಾ 'ಬರೀ ರೈಲು' ಅಂತಲೇ ಹೇಳಬೇಕು.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಹೇಗೆ ಪತ್ರಿಕೆಯಲ್ಲಿ ಓದಿ ಆ ಸುದ್ದಿಯನ್ನು ತಿಳಿದುಕೊಂಡಿದ್ದಾರೋ ಹಾಗೇ ನಾವೂ ಕೂಡ ಓದಿದ್ದೇವೆ, ತಿಳಿದುಕೊಂಡಿದ್ದೇವೆ. ಮಾನ್ಯ ವಿರೋಧಪಕ್ಷದ ಸದಸ್ಯರುಗಳಿಗೆಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಅದನ್ನು ತಡೆಗಟ್ಟಬೇಕೆಂದು ಸರ್ಕಾರಕ್ಕೂ ಇದೆ. ಅದನ್ನು ತಡೆಗಟ್ಟಲು ತಮ್ಮ ಸಲಹೆಗಳನ್ನು ಕೊಡಿ.

ಶ್ರೀ ಕೆ. ಲಿಂಗಪ್ಪ.—ಅಷ್ಟು ಬಹಿರಂಗವಾಗಿ ಕದ್ದು ಸಾಗಿಸುತ್ತಿದ್ದರೂ ಅದನ್ನು ಹಿಡಿಯಲಾಗದ ಸರ್ಕಾರ ಅಧಿಕಾರದಲ್ಲಿರುವುದಕ್ಕೆ ಯೋಗ್ಯವಾದದ್ದಲ್ಲ. ಈ ಸರ್ಕಾರ ರಾಜೀನಾಮೆ ಕೊಡಬೇಕೆಂಬುದೇ ನನ್ನ ಸಲಹೆ.

STATEMENT BY THE MINISTER FOR P. W. AND ELECTRICITY

re : Scarcity Conditions prevailing in the State

Sri H. M. CHANNABASAPPA (Minister for Public Works and Electricty).—Madam Speaker, as the Hon. Minister for Industries puts it, the Government will look into the matter raised by hon. Members just now. Further, I wish to make the following statement with regard to the seasonal conditions in the State.

Consequent upon the receipt of reports about delayed South-West monsoons in Hassan and Mysore districts, I toured the-e district from 4st July 1974 to 4th July, 1974. The rainfall in some of the taluks

in these districts was of the order of 30 per cent to 40 per cent of the previous year of the corresponding periods, *viz.*, April to June. Crops like Jowar, ragi, potato and the ground-nut, etc. in many taluks of Hassan and Mysore districts had almost died. Subsequently, there were spells of rain and fresh sowing operations of such crops which suited the season and locality like ragi, groundnut, etc were taken up. Instructions were issued to take up all the budgetted works in these areas. Works have been taken up departmentally, and instructions have been issued to take up the works under piece-work or N. R., based on the local conditions. For taking up works to provide employment to the people in the affected areas, the following additional amounts, have been released during July and August, 1974 :—

			in lakhs
Month	*Mysore*	*Mandya*	*Hassan*
July 1974	3-10	1-00	3-00
August, 1974	14-00	6-50	13-00
Total	17-10	7-50	16-00

Total for all these three districts–Rs. 40.60 lakhs.

Out of Rs. 40·60 lakhs, Rs. 15.00 lakhs was meant for drilling borewells and the balance amount was for works.

2. As promised by me to the Hon'ble Members, I have to furnish below a picture of the seasonal conditions existing in the various districts of the Mysore Area.—

Mysore District

The rainfall in the month of June was very scanty. It was only 408.8 mm as against 1,115.6 mm during this period in 1973. In the months of July and August, there wave been sufficient rains. There was a rainfall of 1240 mm in July and 425 mm in August. The total area sown in the district is 5,21,629 hectares. Out of this, about 85,700 hectares, which works out to about 15 per cent of the sown area has been affected due to delayed monsoon. The latest situation is that except for the Jowar crop in T. Narasipur taluk, all other standing crops are not affected. This is apart from loss of crops on account of delayed monsoon. Fodder is available in all the Taluks. Transplantation of paddy is in full swing in irrigated areas of all Taluks except in Yelandur as the tanks have not received water. 165 P.W.D. works, 62 Soil Conservation works and 170 NES and TDB works have been taken up in this District and have provided employment of 73,320 man-days. The amount spent so far on these works is Rs. 3,11,551/-. Agricultural labourers in need of employment have

(SRI H. M. CHANNABASAPPA)

been provi led with sufficient employment. The condition of standing crops is fair. If there is any further failure of rains, it may affect the yield of crops in Chamarhjanagar Taluk. Four fast rigs are working in the district and the works are in good progress.

Mandya District.—

The District has receiveed an averag: rainfall of 211.8 mm since April till 23rd of August, as against the normal rainfall of 325 mm during this period. An area of 1,77,780 hectares have been sown in this district, out of which 33,000 hectares have been affected. The worst affected taluk is Naga'nangala. Only 1 : per cent of the land has been sown in this Taluk. In Malavalli Taluk, only 54 per rent of the land has been sown. The crops in ayacut of the river channels nre good. Owing to lack of rains and other difficulties, there has been slowing down of nursery and other operations in VC area. Only tanks fed by channels have generally received water. Jowar crop in Basaral hobli of Mandya Taluk, Nagamangala and parts of Pandavapura Taluk have been affected. Fodder supplies, particularly in Nagamangala and Malavalli Taluks are not adequate and they are being transported from neighbouring taluks by the farmers. 203 P. W. D. works and 21 Soil Conservation works have been taken taken up in this District. 50,135 man-days have been provided. The estimated cost of the 203 works takeu up by P. W. D. is Rs. 7.1 lakhs. An amount of Rs. 2.2 lakhs has been spent so far on these works and a further amount of Rs. 2.09 lakhs has been released for these works during the current month. Two fast rigs are working in the District and the works are in good progress.

Hassan District :-

In May this year, there was some showers in this District. The average rainfall received was 97.4 mm as against 134.1 mm during the previouse year. But in June, the rains failed. The average rainfall received was 50.00 mm as against 249.00 mm during the previous year. Due to this, the area that was sown in the month of May, was seriously affected. In July and August, there has been sufficient rainfall in all the Taluks.

As a result of the delayed monsoon, the Khariff area sown as on 1-7-1974, was only 30 per cent. Subsequently, with the receipt of rains from the 1st of July, 1974, fresh sowings were commenced and covered a fairly large area in the District. Paddy transplantation in Saklespur sub-division has almost come to an end. In regard to maidan area, except in Holenarasipura and Channarayapatna Taluks, 80 per cent of the area under irrigation has been transplanted, covering the atchkut of Changravalli channel in Hassan Taluk, Sriramadevara anecut in Holenarasipur taluk, Kattepura channel in Arkalgud taluk,

Shankuthirtha channel and Chakrathirtha channel in Alur taluk and Kudlur channel in Belur taluk. In Holenarasipura and Channarayapatna taluks, the tanks have not received water.

In respect of Hassan, Arkalgud and Arsikere Taluks, nearly 50 per cent of the area under tank atchkut has been transplanted and the ryots have raised nurseries to cover the remaining area with the expectation that the tank would receive water in future.

The standing dry crops like ragi, jowar, castor and cotton in Arasikere taluk is satisfactory and sesamom is being harvested. However, ragi and cotton crops require rains for their proper growth in Arsikere taluk. In Arkalgud and Hassan taluks, the Standing ragi crop is reported to be fairly satisfactory. In Hassan taluk and parts of Alur and Belur taluks, the available potato crop is under harvest and jowar and maize in the district will be harvested within about a fornight.

In regard to Holenarasipura and Channarayapatna taluks, although the sowings of dry crops has been done, crops are withering for want of rains. They may go bad if immediate rains are not received. So far, P. W. D. have taken up 132 works and the Agriculture Department have taken up 15 Soil Conservation works. An expenditure of Rs. 5.28 lakhs has been incurred during July and August. The expenditure incurred in Channarayapatna alone is Rs. 1.28 lakhs. The total number of labourers employed is about 3,610 as on 24-8-1974. The Executive Engineer, Hassan has distributed printed pamphlets requesting needy people to avail of the employment opportunities afforded by the P. W. D. Most of the workers and ryots got busy with agricultural operations. Inspite of the best efforts made by the derartment, the labour strength on relief works was poor till 12-8-1974, mainly due to the agricultural operations taken up during the period of rainfall. Four fast rigs have been deployed and the works are in good progress.

Kolar istrict :-

In May, the average rainfall in the district was 104.8 mm as against the normal rainfall of 77.2 mm. In June, the average rainfall was 17.5 mm and was very much less than the normal of 62.1 mm. In July, the average rainfall was 108.00 mm as against the normal rainfall of 77.8 mm The monsoons were delayed and they extended upto second week of August. The standing crops are good. No fresh relief works are taken up, except completing the incomplete works. One rig is working in the district.

Chitra urga District :-

There was widespread rainfall during April and first fortnight of May in this District. The rainfall during May and June was 82.1 mm and 15.1 mm respectively, as agrinst the normal rainfall of 72.5 mm and 52.2 mm. In July, the rainfall was 40 mm. and in August, it

(SRI H. M. CHANNABASAPPA)

is about 29.7 mm. A total area of 3,50,143 hectares have been sown in this District. In Challakere, Molalkalmuru and Hiriyur taluks, there have been inadequate rains during July, and the crops have been affected to some extent. Fodder is available in the District. Three fast drilling rigs have been deployed in this District.

Tumkur District :—

The normal and average rainfall during the months of May, June, July and August is as below .—

	Normal	*Actual*
May, 1974	91.7 mm	105.4 mm
June, 1974	57.8 mm	19.8 mm
July, 1974	67.4 mm	42.0 mm
August, 1974	93.2 mm	22.5 mm

In Sira, Pavagada, Kunigal and Chikanayakanahalli taluks, there has been inadequate rainfall. In other taluks, there has been dry spell during the last fortnight. Tanks have not received water. One fast drilling rig has been deployed in this District.

Bangalore District :—

There was good and widespread rainfall during May, 1974 The ryots took advantage of these rains for sowing. But for want of subsequent rains in June, the crops sown were affected. There was a spell of rainfall again in the last week of July and first week of August, which was sufficient for ploughing and sowing operations. Again, there has been a spell of no rains. One rig is deployed in this District.

Chickmagalur District :—

Except in Kadur taluk, the crop condition in the rest of the district is good. Kadur has received rainfall in August, and sowing of ragi has been taken up.

Shimoga District :—

The rainfall in the district is normal in the entire district. The crops are good. Two rigs are deployed in the District.

Bellary District :—

The normal average rainfall in Bellary district for the period, April to July is 232.04 mm. As against this, the actual rainfall during this year was 219.5 mm. Rains started early in April and they were widespread in May and were steady in June. There has, however,

been inadequate rainfall during the month of August, 1974, particularly in Kudligi, Harapanahalli, Hadagali and Hospet Taluks. The standing crops are reported to be withering. Cool weather is prevailing and there is anticipation of rains. Soil conservation works are proposed to be taken up in this area to provide employment to labourers. Three drilling rigs are deployed in this District.

3. Government is watching the situation in all the Districts of the State, and action to provide relief to the agriculturists will be taken wherever necessary.

4. Recently, Government have issued instructions that all budgetted works should be taken up for execution in areas, where rains have failed, provided people come to work and that priority shall be given to Minor Irrigation works in taking up of such budgetted works.

5. Governmsnt is prepared to employ as many people as is necessary in the scarcity areas. Finances required to employ such people will be made available.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳ ಹೇಳಿಕೆಯ ಪ್ರಕಾರ ಮೈಸೂರು ಮತ್ತು ಮಂಡ್ಯ, ಹಾಸನಾ ಜಿಲ್ಲೆಗೆ ಹಣವನ್ನು ಖರ್ಚು ಮಾಡಿರುವುದು ಮೈಸೂರು ಜಿಲ್ಲೆಗೆ 17 ಲಕ್ಷ ರೂಪಾಯಿಗಳನ್ನೂ, ಮಂಡ್ಯ ಜಿಲ್ಲೆಗೆ 7 ಲಕ್ಷ ರೂಪಾಯಿಗಳನ್ನೂ, ಹಾಸನ ಜಿಲ್ಲೆಗೆ 16 ಲಕ್ಷ ರೂಪಾಯಿಗಳನ್ನೂ ಖರ್ಚು ಮಾಡಿದ್ದಾರೆ. ನಾನು ಆ ಬಗ್ಗೆ ಕೇಳುವುದಕ್ಕೆ ಹೋಗುವುದಿಲ್ಲ. ಕೋಲಾರ ಜಿಲ್ಲೆಯಲ್ಲಿ ಪರಿಸ್ಥಿತಿ ಬಹಳ ವಿಗ್ರಹವಾಗಿದೆ. ಅಲ್ಲಿನ ಪರಿಸ್ಥಿತಿ ಬಹಳ ಭೀಕರವಾಗಿದೆ. ನಾನು ಈ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ ಕೋಲಾರ ಜಿಲ್ಲೆಯಲ್ಲಿ ಎಷ್ಟು ಮಳೆ ಬಂದಿದೆ, ಎಷ್ಟು ಬೆಳೆಯಾಗಿದೆ ಎಂಬುದನ್ನು ಎಲ್ಲೋ ಒಂದು ಕಡೆ ಮಳೆ ಆದದ್ದನ್ನು ಆಳತೆ ಮಾಡಿ ಎಲ್ಲಾ ಕಡೆಗಳಲ್ಲಿಯೂ ಇಷ್ಟೇ ಮಳೆಯಾಗಿದೆ ಬೆಳೆಯಾಗಿದೆ ಎಂದು ಕಣ್ಣುಮುಚ್ಚಿ ಕೊಂಡು ಕೇಳಿದ್ದಾರೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಹಾಸನಾ ಮತ್ತು ಮೈಸೂರು ಜಿಲ್ಲೆಗಿಂತ ಪರಿಸ್ಥಿತಿ ಬಹಳ ಭೀಕರವಾಗಿದೆ. ಮಾನ್ಯ ಮಂತ್ರಿಗಳು ಹಾಸನಾ ಮತ್ತು ಮೈಸೂರು ಜಿಲ್ಲೆಗಳಿಗೆ ಹತ್ತಾರು ಬಾರಿ ಹೋಗಿ ಬಂದಿದ್ದಾರೆ. ಆದರೆ ಕೋಲಾರ ಜಿಲ್ಲೆಗೆ ಇಲ್ಲಿಯವರೆಗೂ ಒಬ್ಬರೂ ಮಂತ್ರಿಗಳು ಬಂದಿಲ್ಲ. ಅಲ್ಲಿ ಪರಿಸ್ಥಿತಿ ಬಹಳ ಭೀಕರವಾಗಿದೆ. ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ನಾನು ಸುಮಾರು 70 ಗ್ರಾಮಗಳ ಒಂದು ಪಟ್ಟಿಯನ್ನು ಶ್ರೀಮಾನ್ ಚನ್ನಬಸಪ್ಪನವರಿಗೆ ಕೊಟ್ಟಿದ್ದೇನೆ. ಇಲ್ಲಿಯವರೆಗೂ ಕೂಡ ಕುಡಿಯುವ ನೀರಿನ ಪರಿಸ್ಥಿತಿ ಸುಧಾರಿಸಿಲ್ಲ. ನಮ್ಮ ಜಿಲ್ಲೆಯಲ್ಲಿ ಒಂದು ಥಾರ್ಟ್ ರಿಗ್ಸ್ ಕೆಲಸ ಮಾಡುತ್ತಿದೆ. ನಮ್ಮ ಜಿಲ್ಲೆಯಲ್ಲಿ 11 ತಾಲ್ಲೂಕುಗಳು ಇವೆ. ಆ 11 ತಾಲ್ಲೂಕುಗಳಲ್ಲಿ ಈ ರಿಗ್ಸ್ ಯಾವ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿದೆಯೋ ಗೊತ್ತಿಲ್ಲ. ಈ ರೀತಿ ಕೋಲಾರ ಜಿಲ್ಲೆಯಲ್ಲಿ ಬೀಕರ ಪರಿಸ್ಥಿತಿ ಇರುವಾಗ ಸರ್ಕಾರ ಕಣ್ಣುಮುಚ್ಚಿ ಕೊಂಡು ಕೋಲಾರ ಜಿಲ್ಲೆಯನ್ನು ಅನಾದರಣೆಯಿಂದ ನೋಡುತ್ತಿದ್ದಾರೆ ಎಂದು ಅನಿಸುತ್ತದೆ, ಕೋಲಾರ ಜಿಲ್ಲೆ ಕರ್ನಾಟಕದಲ್ಲಿ ಇದೆಯೋ ಅಥವಾ ಯಾವ ರಾಜ್ಯದಲ್ಲಿದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ನಾನು ಕೇಳಿರತಕ್ಕ ಅಂಶಗಳಿಗೆ ವಿವರಣೆ ಕೊಡ ಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಾಪುಗೌಡ—ಗುಲ್ಬರ್ಗಾ ಜಿಲ್ಲೆಯಲ್ಲಿ ಮತ್ತು ಬೀದರ್ ಜಿಲ್ಲೆಗಳ ಪರಿಸ್ಥಿತಿಯ ಬಗೆ ಮಾನ್ಯ ಮಂತ್ರಿಗಳು ಯಾವ ವಿಚಾರವನ್ನು ಹೇಳಿಲ್ಲ. ನಾನು ಈ ಬಗ್ಗೆ ಒಂದು ನೋಟೀಸ್ ಕೂಡ ಕೊಟ್ಟಿದ್ದೇನೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಹೇಳಿಕೆಯನ್ನು ಕೊಟ್ಟರೆ ಚೆನ್ನಾಗಿರುತ್ತದೆ.

ಶ್ರೀ ಕೆ. ಪ್ರಭಾಕರ್.—ಬೆಂಗಳೂರು ಜಿಲ್ಲೆಯಲ್ಲಿ ಕೆಲವು ಸ್ಕೇರ್ಸಿಟಿ ಪಾಕೆಟ್‌ಗಳು ಇವೆ. ಈ ಜಿಲ್ಲೆಯಲ್ಲಿ ಕೆಲವು ಗ್ರಾಮಗಳಲ್ಲಿ ಜನಗಳಿಗೆ ಮತ್ತು ದನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಈಗ ಮಾನ್ಯ ಮಂತ್ರಿಗಳು ಮೈಸೂರು, ಮಂಡ್ಯ ಮತ್ತು ಹಾಸನಾ ಜಿಲ್ಲೆಗಳಿಗೆ ಸಂಬಂಧಪಟ್ಟ ಹಾಗೆ ಮಾತ್ರ ತಮ್ಮ ಸ್ಟೇಟ್‌ಮೆಂಟಿನಲ್ಲಿ ಹೇಳಿದ್ದಾರೆ. ಬೆಂಗಳೂರು ಜಿಲ್ಲೆಯಲ್ಲಿ ಹಾಗೂ ಇನ್ನೂ ಕೆಲವು

(ಶ್ರೀ ಕೆ. ಸ್ವಭಾಕರ್)

ಕಡೆ ಮಳೆ ಇಲ್ಲದೆ ಬೆಳೆಗಳು ಒಣಗಿ ಹೋಗಿವೆ. ಆದ್ದರಿಂದ ಎಲ್ಲಾ ಕಡೆಗೂ ಅನ್ವಯಿಸುವ ಹಾಗೆ ಒಂದು ಕಾಂಪ್ರಹೆನ್ಸಿವ್, ಸ್ಕೀಮು ಮಾಡಿಕೊಂಡು ಎಲ್ಲೆಲ್ಲಿ ಯಾವ ಯಾವ ಕೆಲಸಗಳನ್ನು ಮಾಡ ಬೇಕು ಎನ್ನುವ ಬಗ್ಗೆ ಒಂದು ಪಿಜಿಲೆನ್ಸ್ ಸರ್ವೆ ಮಾಡಿ ಆ ಎಲ್ಲಾ ಕೆಲಸಗಳನ್ನೂ ತೆಗೆದುಕೊಳ್ಳ ಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನ ಜಿಲ್ಲೆಯಲ್ಲಿ ಇತ್ತೀಚೆಗೆ ಪರಿಸ್ಥಿತಿ ಉತ್ತಮವಾಗಿವೆ ಎಂದು ಹೇಳಿದ್ದಾರೆ. ಚನ್ನರಾಯಪಟ್ಟಣ, ಹಾಸನ $\frac{1}{4}$ ಭಾಗ, ಹೊಳೆನರಸೀಪುರ ಪೂರ್ತಿ, ಅರಸಿ ಕೆರೆಯ ತಾಲ್ಲೂಕಿನಲ್ಲಿ ಅರ್ಧಭಾಗ ಈ ಪ್ರದೇಶಗಳಲ್ಲಿ ಸಾಕಷ್ಟು ಮಳೆ ಆಗಿಲ್ಲ. ಈ ಮುಂಚೆ ಹಾಕಿದ್ದಂತಹ ಬೆಳೆಯಲ್ಲಿ ಅರ್ಧಭಾಗ ಒಣಗಿ ಹೋಗಿದೆ. ಹೀಗಿರುವಾಗ 50 ಪರ್ಸೆಂಟ್ ಟ್ಯಾಂಕ್ ಏರಿಯಾದಲ್ಲಿ ನಸಿಯನ್ನು ನಾಟಿ ಹಾಕುತ್ತಿದ್ದಾರೆ ಎಂದು ಮಾನ್ಯ ಮಂತ್ರಿಗಳು ಏನು ಹೇಳಿದರು ಅದು ಸತ್ಯಕ್ಕೆ ದೂರವಾದ ಮಾತು. ಚನ್ನರಾಯ ಪಟ್ಟಣದ ತಾಲ್ಲೂಕಿನಲ್ಲಿ ಕೆರೆಗಳ ಹಿಂಭಾಗದಲ್ಲಿ 50 ಪರ್ಸೆಂಟ್ ನಾಟಿಯನ್ನು ಹಾಕಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆರೆಗೆ ನೀರು ಬಂದಿಲ್ಲ ಎಂದು ಹೇಳಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ.—64ನೇ ಫ್ಯಾಮಿನ್ ರಿಲೀಫ್ ನಾರಮ್ಸ್ ಏನಿದೆ ಅದನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ಕೊಟ್ಟು ಆ ಕೆಲಸಕ್ಕೆ ಆಳುಗಳು ಬರುತ್ತಾ ಇಲ್ಲ. ಎರಡನೆಯದು ಆ ಕೆಲಸವನ್ನು ಪೀಸ್ ವರ್ಕ್ ಸಿಸ್ಟಂ ಮೇರೆ ಕೊಡದೆ ಅವರಿಗೆ ಅಡ್ವಾನ್ಸ್ ಕೊಡದೆ ಇದ್ದರೆ ಹೊಟ್ಟೆಗೆ ಹಿಟ್ಟಿಲ್ಲದೆ ಇರುವವರು ಹೇಗೆ ಕೆಲಸಕಾರ್ಯಗಳನ್ನು ಮಾಡುತ್ತಾರೆ ? 64ನೇ ಫ್ಯಾಮಿನ ರಿಲೀಫ್ ವರ್ಕ್ಸ್‌ಗೆ ಕೊಟ್ಟಂತಹ ಹಣವನ್ನು ಖರ್ಚು ಮಾಡಬಾರದು ಎನ್ನುವ ರೀತಿಯಲ್ಲಿ ಪಬ್ಲಿಕ್ ವರ್ಕ್ಸ್ ಕೆಳಗೆ ಈ ಕೆಲಸವನ್ನು ತೆಗೆದುಕೊಂಡರೆ ಅದಕ್ಕೆ ಸಾಕಷ್ಟು ಜನಗಳು ಬರುವುದಿಲ್ಲ. ಆದ್ದರಿಂದ ಈ ಕೆಲಸವನ್ನು ತಕ್ಷಣ ಪೀಸ್ ವರ್ಕ್ ಸಿಸ್ಟಂ ಮೇರೆ ಈ ಕೆಲಸವನ್ನು ಕೊಟ್ಟು ಅವರಿಗೆ ಅಡ್ವಾನ್ಸ್ ಕೊಟ್ಟು ಈ ಕೆಲಸವನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹಾಸನ ಜಿಲ್ಲೆಗೆ ಕೆಲವು ರಿಗ್ಸ್‌ಗಳನ್ನು ಕಳುಹಿಸಿ ಕೆಲವು ಊರು ಗಳಲ್ಲಿ ಬೋರ್ ಹಾಕಿದ್ದಾರೆ. ಸುಮಾರು 45 ಕಡೆ ಬೋರ್ ಹಾಕಿದ್ದಾರೆ. ಆ ಪೈಕಿ 25 ಫೈಲ್ಯೂರ್ ಆಗಿವೆ. ಒಂದು ಜಾಗದಲ್ಲಿ ಬೋರ್ ಹಾಕಿದ ಮೇಲೆ ಅಲ್ಲಿ ನೀರು ಬರುವುದು ಫೈಲ್ಯೂರ್ ಆದರೆ ಮತ್ತೊಂದು ಕಡೆ ಬೋರ್ ಹಾಕಿ ನೋಡಬೇಕು ಆದಕ್ಕೆ ಆ ರೀತಿ ಮಾಡದೆ ಮುಂದಕ್ಕೆ ಹೋಗಿದ್ದಾರೆ.

10.30 A.M.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಈ ಬಗ್ಗೆ ಒಂದು ನ್ಯೂಜ್ ಚಿತ್ರವನ್ನು ಏನು ಕೊಟ್ಟಿದ್ದಾರೆ ಅದಕ್ಕಾಗಿ ನಾನು ವಂದನೆಗಳನ್ನು ಅರ್ಪಿಸ ಬೇಕಾಗಿದೆ. ಸಾಮಾನ್ಯವಾಗಿ ನಮ್ಮ ನಾಗಮಂಗಲ ತಾಲ್ಲೂಕಿನ ಬಗ್ಗೆ ಹೇಳುವುದಾದರೆ ಆ ತಾಲ್ಲೂಕು ಒಂದು ಭೀಕರವಾದ ಬರಗಾಲ ಕ್ಷೇತ್ರ. ಅವರು ಈ ಬಗ್ಗೆ ಏನೊಂದು ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡಿದ್ದಾರೆ ಅದನ್ನು ನೋಡಿದರೆ ಈ ಬರಗಾಲ ಆಗಾಗ್ಗೆ ಸಂಭವಿಸಿದರೂ ಕೂಡ ಕಳೆದ 12-14 ವರ್ಷದಿಂದಲೂ ಕೂಡ ಇಂಥಾ ಮಟ್ಟದ ಕಷ್ಟಪರಿಸ್ಥಿತಿ ಯಾವಾಗಲೂ ಉಂಟಾಗಿರಲಿಲ್ಲ. ಹಿಂದೆ 1969-70 ರಲ್ಲಿ ಬರಗಾಲ ಕಡಿಮೆ ಇದ್ದಾಗ ಅವಾಗ 16-17 ಲಕ್ಷ ರೂಪಾಯಿಗಳನ್ನು ನಮ್ಮ ತಾಲ್ಲೂಕು ಒಂದಕ್ಕೇನೇ ಕ್ಷಾಮಪರಿಹಾರ ಕೆಲಸಕ್ಕಾಗಿ ಒದಗಿಸಿದ್ದರು.

ಅಧ್ಯಕ್ಷರು.—ಅವಾಗ ಹಣ ಇತ್ತು ಒದಗಿಸಿದ್ದರು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇನ್ನು 1964 ರಲ್ಲಿ ನೋಡಿದರೆ ಅವಾಗಲೂ ಬರಗಾಲ ಕಡಿಮೆ ಇತ್ತು. ಅವಾಗಲೂ ಕೂಡ ಎಷ್ಟು ಹಣವನ್ನು ಈ ಕ್ಷಾಮ ಪರಿಹಾರ ಕೆಲಸಕ್ಕಾಗಿ ಯಾವಮಾವ ಬಾಬುಗಳಿಗೆ ಹಣ ಒದಗಿಸಿದ್ದಾರೆ ಎನ್ನುವುದು ಸರ್ಕಾರದಲ್ಲಿ ಮಾಹಿತಿ ಇದೆ. ಹಿಂದೆ ಇದ್ದಿರ ತಕ್ಕಂಥ ಕಷ್ಟಪರಿಸ್ಥಿತಿಗಳು ಈಗ ಬಂದಿರತಕ್ಕಂಥ ಕಷ್ಟಪರಿಸ್ಥಿತಿಗಳನ್ನು ತುಲನೆ ಮಾಡಿ ನೋಡಿದರೆ ಅವರಿಗೇನೇ ಗೊತ್ತಾಗುತ್ತದೆ. ಇನ್ನು ಈ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಲೋಕೋಪ ಯೋಗಿ ಇಲಾಖೆಗೆ ಸೇರಿದಂಥಾ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ಒಂದು ಹೋಬಳಿಗೆ 2-3-4 ಲಕ್ಷ ರೂಪಾಯಿಗಳು ಸಿಕ್ಕಬಹುದು. ಹೀಗಾಗಿ ಎಲ್ಲ ಕಡೆಯೂ ಕೆಲಸ

ತೆಗೆದುಕೊಳ್ಳದೇ ಹೋದರೆ ಜನಗಳಿಗೆ ಕೆಲಸ ಸಿಕ್ಕುವುದಿಲ್ಲ, ಜನಗಳಿಗೆ ಕೆಲಸ ಸಿಕ್ಕದೇ ಹೋದರೆ ದೇಶದಲ್ಲಿ ಆಹಾರೋತ್ಪಾದನೆ ಆಗುವುದಿಲ್ಲ. ಆದುದರಿಂದ ಈ ಕ್ಷಾಮ ಪರಿಹಾರಕ್ಕಾಗಿ ಪ್ರತ್ಯೇಕವಾಗಿ ಹಣ ಖರ್ಚು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರ ಮೂಲಕ ಒಂದೇ ಒಂದು ವಿಷಯವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದು ಏನೆಂದರೆ ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಕೈಗೊಂಡಿರುವ ತಕ್ಕಂಥಾ ಕಾಮಗಾರಿ ಕೆಲಸಗಳ ಪ್ರಮಾಣ ಬಹಳ ಕಡಿಮೆ. ಮತ್ತು ಅವರು ಕೊಡತಕ್ಕಂಥ ಸಹಾಯ ಧನವೂ ಬಹಳ ಕಡಿಮೆ. ನಮಗೆ 100ಕ್ಕೆ 5 ರಷ್ಟಾದರೂ ಸಹಾಯ ಮಾಡಲಿ. ಹೋದ ಸಾರಿ ಫಾದರ್‌ಗೆ ಸರ್ಕಾರದವರು ದುಡ್ಡು ಕೊಡುತ್ತಿದ್ದರು. ಅದು ದಾಖಲೆಯಲ್ಲಿದೆ, ಅದನ್ನು ಈವಾಗ ಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದಾರೆ. ಅದರಿಂದ ದನಗಳನ್ನೂ ಕೊಂದಂತಾಗುತ್ತದೆ ಮತ್ತು ಜನಗಳನ್ನು ಕೂಡ ಕೊಂದಂತಾಗುತ್ತದೆ. ಮತ್ತು ಮುಂದೇನಾಗುತ್ತದೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಮಾನ್ಯ ಲೋಕೋಪಯೋಗಿ ಮಂತ್ರಿಗಳು ದಯಮಾಡಿ ನಮ್ಮ ಭಾಗದಲ್ಲರುವ ಜನಗಳ ಕಷ್ಟಗಳನ್ನು ನೋಡುವುದಕ್ಕೆ ಬರಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಬರುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಯಾವಾಗ ಬರುತ್ತೀರಿ, ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಮೇಲೆ ಮಾತನಾಡೋಣ.

ಶ್ರೀ ಟಿ. ಎಂ. ಮುಂಜುನಾಥ್.—ಸ್ವಾಮಿ, ತಾವು ತುಮಕೂರು ಜಿಲ್ಲೆಯಲ್ಲಿ 4 ಭಾಗಗಳಲ್ಲಿ ಮಳೆ ಆಗಿದೆ ಬಾಕಿ ಭಾಗಗಳಲ್ಲಿ ಮಳೆ ಆಗಿಲ್ಲ ಎಂದು ಹೇಳಿದಿರಿ. ನಮ್ಮ ತಾಲ್ಲೂಕಿನಲ್ಲಿ ಏನಾಗಿದೆ ಎಂದರೆ ಮುಂಗಾರು ಬೆಳೆ ಸಂಪೂರ್ಣವಾಗಿ ನಾಶವಾಗಿದೆ ಮತ್ತು ಮುಂಗಾರಿನಲ್ಲಿ ಬೀಜ ಬಿತ್ತಿದ್ದೂ ಕೂಡ ಹೋಗಿದೆ. ಇದರಿಂದಾಗಿ ಎರಡು ಬೆಳೆಯೂ ಕೂಡ ಹೋಗಿದೆ. ದುರ್ಭೆವದಿಂದ ಲೋಕೋಪಯೋಗಿ ಇಲಾಖೆಯವರು ಒಂದು ಕಾಸು ಕೆಲಸವನ್ನೂ ತೆಗೆದುಕೊಂಡಿಲ್ಲ. ಬಡ್ಡೆಟ್ ವರ್ಕ್‌ನಲ್ಲಿ ಮಾಡಿ ಎಂದು ಹೇಳಿದರೂ ಕೂಡ ಬಡ್ಡೆಟ್ ವರ್ಕ್‌ನಲ್ಲಿ ಯಾವ ಕೆಲಸವನ್ನೂ ಮಾಡಿಲ್ಲ. ಸಾಯಿಲ್ ಕನ್‌ಸರ್ವೇಷನ್‌ನಿಂದಾಗಲಿ, ಅಥವಾ ತಾಲ್ಲೂಕ್ ಬೋರ್ಡ್‌ನಿಂದಾಗಲಿ ಅಥವಾ ಪಿ ಡಬ್ಲ್ಯು ಡಿ. ಇಲಾಖೆಯಿಂದಾಗಲಿ ಯಾವ ಕಾಮಗಾರಿ ಕೆಲಸಗಳೂ ನಡೆಯದೇ ಇದ್ದಾಗ ಜನಗಳ ಪರಿಸ್ಥಿತಿ ಏನು ಕಷ್ಟ ಇದೆ ಅನ್ನುವುದನ್ನು ತಾವು ನೋಡಬೇಕು. ಅಲ್ಲದೆ ನಮ್ಮ ತಾಲ್ಲೂಕಿನ ತೆರಗಿನ ಗಿಡಗಳಿಗೆ 6 ವರ್ಷದಿಂದ ಮಳೆ ನತತವಾಗಿ ಇಲ್ಲ. ಬಹಳ ತೊಂದರೆಗೀಡಾಗಿದೆ. ಅದರ ನುಳಿಯೂ ಕೂಡ ಒಣಗಿಹೋಗಿಬಿಟ್ಟಿದೆ. ನಮ್ಮ ತಾಲ್ಲೂಕಿಗೆ ಬಂದು ನೋಡಿದರೆ ತಮಗೆ ಗೊತ್ತಾಗುತ್ತದೆ. ಆ ತೆಂಗಿನ ಮರಗಳ ಗರಿಗಳೆಲ್ಲಾ ಬಿದ್ದುಹೋಗಿಬಿಟ್ಟಿದೆ, ಮತ್ತು ನಮ್ಮ ತಾಲ್ಲೂಕಿನ 10-20 ಕೆರೆಗಳಲ್ಲಿ ನೀರು ಇಲ್ಲ, ಈ ರೀತಿಯಾಗಿರುವುದರಿಂದ ನಮ್ಮ ತಾಲ್ಲೂಕಿಗೆ ರುದ್ರ ಪರಿಸ್ಥಿತಿ ಒಂದಿದೆ. ಆದುದರಿಂದ ತಾವು ಈ ಭಾಗಕ್ಕೆ ಗಮನ ಕೊಟ್ಟು ಕಾಮಗಾರಿ ಕೆಲಸಗಳನ್ನು ಮಾಡಿಸಿಕೊಡಬೇಕು ಎಂದೂ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ತಾರೇಗೌಡ.—ತಾವು ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ 4 ಭಾಗಗಳಿಗೆ ಮಳೆಯಾಗಿದೆ ಎಂದು ಹೇಳಿದಿರಿ. ಬಾಕಿ ಕಡೆ ಸಾಕಷ್ಟು ಮಳೆ ಆಗಿಲ್ಲ ಅನ್ನುವುದನ್ನು ತಾವು ಒಪ್ಪಿಕೊಂಡಿದ್ದೀರಿ. 15 ವರ್ಷದಿಂದಲೂ ನಮ್ಮ ಭಾಗದಲ್ಲಿ ಅಂದರೆ ಮಧುಗಿರಿಯಲ್ಲಿ ಸಾಕಷ್ಟು ಮಳೆ ಆಗಿಲ್ಲ. ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಯಾವರೀತಿ ಪರಿಹಾರ ಕಾರ್ಯಕ್ರಮ ಕೈಗೊಂಡಿದ್ದೀರಿ ಅದೇ ರೀತಿ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದರೂ ಕೂಡ ಇನ್ನೂ ಯಾವ ಕೆಲಸವನ್ನೂ ತೆಗೆದುಕೊಳ್ಳಲಿಲ್ಲ. ಇದುವರೆಗೂ ಕೂಡ ಅಲ್ಲಿ ಮಳೆ ಬಂದಿಲ್ಲ. ದನಗಳಿಗೆ ಮೇವು ಇಲ್ಲ ತೆಂಗಿನ ಗರಿಗಳೆಲ್ಲಾ ಬಿದ್ದು ಹೋಗುತ್ತಾ ಇದೆ, ಮತ್ತು ತೆಂಗಿನ ಮರದ ನುಳಿಗಳೆಲ್ಲಾ ಒಣಗಿಹೋಗುತ್ತಾ ಇದೆ. ಅಲ್ಲದೆ ಈವಾಗ ಜನಗಳಿಗೆ ಬಹಳ ತೊಂದರೆ ಇರುವುದರಿಂದ ರೆವಿನ್ಯೂ ಇನ್‌ಸ್ಪೆಕ್ಟರ್ ವಗೈರೆಯವರು ರೈತರ ಹತ್ತಿರ ಕಂದಾಯವನ್ನು ವಸೂಲ್ಮಾಡುವುದಕ್ಕೆ ಬಹಳ ತೊಂದರೆ ಕೊಡುತ್ತಿದ್ದಾರೆ. ಅವರ ಚರಸ್ಥಿರಾಸ್ತಿಗಳನ್ನು ಜಪ್ತಿ ಮಾಡುತ್ತಿದ್ದಾರೆ. ಈ ರೀತಿಯಾಗಿ ಅವರಿಗೆ ಹಿಂಸೆ ಕೊಡುತ್ತಿದ್ದಾರೆ. ಇಂತಹ ಕಷ್ಟಕಾಲದಲ್ಲಿ ಅವರಿಗೆ ಸರ್ಕಾರ ಸಹಾಯ ಮಾಡದೇ ಹೋದರೆ ನಾವು ಮುಖ ತೋರಿಸಿಕೊಂಡು ಕೊತುಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಅವರ ನೆರವಿಗೆ ಸರ್ಕಾರದವರು ಬಂದು ಆ ರೈತರು ಕಂದಾಯ ವಗೈರೆ ಏನು ಕೊಡಬೇಕೋ ಅದರ ವಸೂಲಾತಿಯನ್ನು ಮುಂದುವರೆಸಬೇಕು, ಅನ್ಯಥಾ ಜನಗಳಿಗೆ ಈ ಕಷ್ಟಕಾಲದಲ್ಲಿ ತೊಂದರೆ ಕೊಡಬಾರದು ಎಂದು ವಿನಯದಿಂದ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ ಮಾನ್ಯ ಮಂತ್ರಿಗಳು 4 ಭಾಗಗಳಲ್ಲಿ ಮಳೆ ಆಯಿತು ಬಾಕಿ ಕಡೆಯಲ್ಲಿ ಮಳೆ ಆಗಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ನಾನು ಹೇಳುವುದು ಏನೆಂದರೆ ನಮ್ಮ ತಾಲ್ಲೂಕಿನಲ್ಲಿ ತುರುವೇಕೆರೆ ತಾಲ್ಲೂಕಿನಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಮಳೆ ಇಲ್ಲ, ಕುಡಿಯುವ ನೀರು ಇಲ್ಲ, ದನಗಳಿಗೂ ತೊಂದರೆಯಾಗಿದೆ, ಜನಗಳಿಗೂ ತೊಂದರೆಯಾಗಿದೆ. ಮುಖ್ಯಮಂತ್ರಿ ಗಳನ್ನು ಮತ್ತು ಲೋಕೋಪಯೋಗಿ ಇಲಾಖಾ ಮಂತ್ರಿಗಳನ್ನು ನೋಡಿದಾಗ ಆಲ್ಲಿ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಸೇಳಿದರೂ ಇನ್ನೂ ಕೂಡ ಯಾವ ಕಾರ್ಯಕ್ರಮವನ್ನೂ ತೆಗೆದು ಕೊಂಡಿಲ್ಲ. ಆದುದರಿಂದ ತುಮಕೂರು ಜಿಲ್ಲೆಯ ಬೇರೆ ಭಾಗಗಳಲ್ಲೂ ಕೂಡ ಕೂಡಲೇ ಕಾಮ ಗಾರಿ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಧ್ಯಕ್ಷರೇ, ಸರ್ಕಾರಕ್ಕೆ ನಿನಾದರೂ ಕಣ್ಣು ಕಿವಿ, ಹೃದಯ ಇದೆಯೇ ತಾವು ಈ ಮಾತನ್ನು ಹೇಳಿದರೆ ಅನ್ಯಥಾ ಭಾವಿಸಬೇಡಿ ಅವರಿಗೆ ಏನೂ ಗೊತ್ತಾಗುವುದಿಲ್ಲ. ಅವರು ಕಲ್ಲಿನಂತಹ ವಿಗ್ರಹದಂತೆ ಇದ್ದಾರೆ. ಇದು ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ದುರ್ದೈವವಶಾತ್ ನಮ್ಮ ಕರ್ನಾಟಕ ಭಾಗದಲ್ಲಿ, ಹಳೇ ಮೈಸೂರು ಭಾಗದಲ್ಲಿ ಅನೇಕ ಜಿಲ್ಲೆಗಳಲ್ಲಿ ಮಳೆ ಇಲ್ಲ. ಅವರು ಕಾಮಗಾರಿ ಕೆಲಸ ಮಾಡಿಸ್ದೇವೆ ಅಂತ ಹೇಳುತ್ತಾರೆ, ಮೈಸೂರಿಗೆ 17 ಲಕ್ಷ ರೂಪಾಯಿ ಕೊಟ್ಟಿದ್ದೇವೆ, ಇನ್ನೊಂದು ಕಡೆ 12 ಲಕ್ಷ ರೂಪಾಯಿ ಕೊಟ್ಟಿದ್ದೇವೆ ಅಂತ ಹೇಳುವುದು ಮಾತ್ರೇ ? ಕೆರೆಗಳಲ್ಲಿ ನೀರು ಇಲ್ಲ, ಕುಡಿಯುವುದಕ್ಕೆ ಬಾವಿಗಳಲ್ಲಿ ನೀರು ಇಲ್ಲ, ಜನಗಳಿಗೆ ತಿನ್ನ ಲಿಕ್ಕೆ ಕಾಳು ಇಲ್ಲ, ದನಗಳಿಗೆ ಮೇವು ಇಲ್ಲ. ಸರ್ಕಾರದಿಂದ ಈ ಬಗ್ಗೆ ಯಾವ ಕಾರ್ಯಕ್ರಮವೂ ಇಲ್ಲ. ನಮ್ಮ ಭಾಗದಲ್ಲಿ ಆಗಿರತಕ್ಕಂಥ ನಷ್ಟದ ಚಿತ್ರವನ್ನು ಇಟ್ಟಿದ್ದೇವೆ. ಹಿಂದೆ ಫ್ಯಾಮಿನ್ ರಿಲೀಫ್‌ಗೆ 64 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಈವಾಗ ಕೇವಲ 10 ಲಕ್ಷ 20 ಲಕ್ಷ ಕೊಟ್ಟರು ಎಂದರೆ ಈ ಉಪಚಾರದ ಮಾತನ್ನು ಕೇಳಿಕೊಂಡು ನಾವು ಊರಿಗೆ ಹೋದರೆ ಜನಗಳ ಹತ್ತಿರ ಬಿಡಿಸಿ ಕೊಳ್ಳುವುದಕ್ಕಾಗುತ್ತದೆಯೇ ? ನಾವು ಆ ರೀತಿ ಮಾಡುವುದಾದರೆ ನಮ್ಮ ಅಂತಃಕರಣ ಶುದ್ಧಿ ಯಿಂದ ಕೆಲಸ ಮಾಡಿದ ಹಾಗಾಗುವುದಿಲ್ಲ. ನೀವು ನಮ್ಮ ಭಾಗಕ್ಕೆ ಒಂದು ರಿಗ್ ಕಳುಹಿಸಿದ್ದರೂ ಕೂಡ ಯಾವ ಕಾಮಗಾರಿ ಕೆಲಸವೂ ನಹ ಆಗಿಲ್ಲ. ಅದನ್ನು ಬಡ್ಜೆಟ್‌ನಲ್ಲಿ ಅಳವಡಿಸಿಕೊಂಡಿದ್ದರೂ ನಹ ಆ ಕೆಲಸವನ್ನು ಪಿ. ಡಬ್ಲ್ಯು. ಡಿ. ಇಲಾಖೆಯಿಂದ ತೆಗೆದುಕೊಂಡಿಲ್ಲ ಈ ಕೆಲಸವನ್ನು ಮಾಡಿಸಿ ಎಂದು ಅನೇಕ ಸಾರಿ ನಾವು ಇಲ್ಲಿ ಒತ್ತಾಯ ಪೂರ್ವಕವಾಗಿ ಹೇಳಿದ್ದೇವೆ. ಒಂದಲ್ಲ ಒಂದು ಕುಂಟು ನೆಪ ಹೇಳಿ ಕೆರೆ ಕಟ್ಟಿಸುವುದು, ಮೈನರ್ ಇರಿಗೇಷನ್ ವರ್ಕ್ಸ್ ಇವುಗಳಲ್ಲೆವನ್ನೂ ನಿಲ್ಲಿಸಿ ಬಿಟ್ಟಿರಿ. ನೀವು ಏನು ಕೆಲಸವನ್ನು ಮಾಡಿಸುತ್ತಿದ್ದೀರಿ ಎಂದು ನಾನು ಕೇಳುತ್ತೇನೆ ? ಇವತ್ತು ನೀವು ಎಷ್ಟು ಹಣ ನ್ನು ಈ ಕೆಲಸಗಳಿಗಾಗಿ ಇಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು ಸುಮ್ಮನೇ ಹೋದರೆ ಇವತ್ತು ಜನ ನಮ್ಮನ್ನು ಸುಮ್ಮನೆ ಬಿಡುವುದಿಲ್ಲ

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾದ್ಯಕ್ಷಣೀಯರೇ, ಮಾನ್ಯ ಪಿ.ಡಬ್ಲ್ಯೂ.ಡಿ ಮಂತ್ರಿಗಳು ಈ ಸಭೆಗೆ ಮುಂದು ಹೇಳಿಕೆಯನ್ನು ನೀಡಿ ಕೆಲವು ವಿವರಣೆಗಳನ್ನು ಕೊಟ್ಟಿದ್ದಾರೆ. ಆ ಹೇಳಿಕೆಯ ಸತ್ಯಾಂಶದ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಬಹುಶಃ ಅವರ ಅಧಿಕಾರಿಗಳು ಕೊಟ್ಟಿರತಕ್ಕಂಥ ಚಿತ್ರವನ್ನೇ ಸಭೆಯ ಮುಂದಿಟ್ಟಿದ್ದಾರೆ. ಆದರೆ ಕೊಟ್ಟಿರತಕ್ಕಂಥ ಹಣ ಕೂಡ ಪೂರ್ತಿ ಖರ್ಚಾಗಿಲ್ಲ. ಈಗ ಏನಾಗಿದೆ ಎಂದರೆ ಕೊಟ್ಟಿರತಕ್ಕಂಥ ಹಣವೇ ಸಾಲದು ಎನ್ನುವಂಥ ಒಂದು ವಾತಾವರಣವಿದ್ದರೆ, ಕೊಟ್ಟಿರತಕ್ಕಂಥ ಹಣವೂ ಕೂಡ ಖರ್ಚಾಗಿಲ್ಲ. ಮೈಸೂರಿಗೆ ಸುಮಾರು 17 ಲಕ್ಷವೇನೋ ಕೊಟ್ಟಿದ್ದಾರೆ ಅದರಲ್ಲಿ 4-5 ಲಕ್ಷ ರೂಪಾಯಿಗಳು ಖರ್ಚಾಗಿದೆಂದು ತಿಳಿಸಿದ್ದಾರೆ, ಮಂಡ್ಯಕ್ಕೆ 7 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಅದರಲ್ಲಿ ಸ್ವಲ್ಪ ಭಾಗ ಮಾತ್ರ ಖರ್ಚಾಗಿ ದೆಂದು ಹೇಳಿದ್ದಾರೆ, ಮತ್ತೆ ಹಾಸನಕ್ಕೆ 13 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದರಲ್ಲಿ ಕೇವಲ 1 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ನಾನು ಮೊನ್ನೆ ದಿವಸ ತಮ್ಮ ಮುಖೇನ ಇಷ್ಟು ವಿವರಣೆಯನ್ನು ಮಾತ್ರವಲ್ಲ ಕೇಳಲು ಬಯಸಿದ್ದು. ನಾನು 12ನೇ ತಾರೀಖು ಚರ್ಚೆಯಾದಾಗ mode of execution of work ಎಷ್ಟು ಆಗಿದೆ ಎಂದು ಕೇಳಿದ್ದೆ. ಮತ್ತು magnitude or the work that was executed in the previous year, ಏನಾಗಿದೆ ಎಂದು ಕೇಳಿದ್ದೆ. ಎನ್.ಆರ್. ಪೀಸ್‌ವರ್ಕ್ ನ ಮೇಲೆ ಕೊಡುವುದು ಬೇಡ, ಮತ್ತು ಅಲ್ಲಿಯ ಸ್ಥಳೀಯ ಮುಖಂಡರಿಗೂ ಕಾಂಟ್ರಾಕ್ಟ್ ಕೊಡುವುದು ಬೇಡ. ಪೀಸ್ ವರ್ಕ್ ಕೊಟ್ಟು ಅಲ್ಲಿಯ ಜನಗಳಿಗೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ನಾನು ಕೇಳಿದ್ದು. ಎಷ್ಟು ಪೀಸ್ ವರ್ಕ್ ಮಾಡಲು ಆರ್ಡರ್ ಕೊಟ್ಟಿದ್ದೀರಿ ಆ ಆರ್ಡರ್ ಕಾಫಿಯನ್ನು ಈ ಸಭೆಯ ಮುಂದಿಡಬೇಕೆಂದು ನಾನು ಕೇಳಿದ್ದು. ಮಾನ್ಯ ಸಭಾದ್ಯಕ್ಷಣೀಯರೇ ನಾನು ಬಹಳ ಖೇದದಿಂದ ಹೇಳಬೇಕಾಗುತ್ತದೆ, ಈ ಪಿ.ಡಬ್ಲ್ಯೂ.ಡಿ. ಇಲಾಖೆ ದುರ್ದೈವದಿಂದ ಇಷ್ಟು ಕೀಳುಮಟ್ಟಕ್ಕೆ ಬರ

ಬಾರದಾಗಿತ್ತು. ಬಹುಶಃ ನಮ್ಮ ಕರ್ನಾಟಕದ ಇತಿಹಾಸದಲ್ಲಿಯೇ ಲೋಕೋಪಯೋಗಿ ಇಲಾಖೆಗೆ ಬಂದಿರತಕ್ಕಂಥ ಗಂಡಾಂತರವಿದು ಎಂದು ಹೇಳಬೇಕಾಗುತ್ತದೆ. ಒಂದು ಶನಿಕಾಟ ಈ ಇಲಾಖೆಗೆ ಹಿಡಿದಿದೆ ಎಂದು ಹೇಳಬಹುದು. ನಿನ್ನೆ ದಿವಸ ನಾನು ಮಾತನಾಡುವಾಗ ತಾಳ್ಮೆಯನ್ನು ಕಳೆದು ಕೊಂಡಿದ್ದೆ ಎಂದು ತಾವು ನನ್ನೆ ಹೇಳಿದಿರಿ. ಇನ್ನು ಎಷ್ಟು ದಿನ ಎಂದು ಸವಾರಿ ಮೇಲೆ ಸವಾರಿ ಮಾಡುವವರು ? ಇದಕ್ಕೆ ಹಳ್ಳಿಯಲ್ಲಿ ಇನ್ನೊಂದು ಶಬ್ದವನ್ನು ಉಪಯೋಗಿಸುತ್ತಾರೆ, ತಾವು ಇಲ್ಲಿ ಕುಳಿತಿದ್ದೀರಿ ಎಂದು ಆ ಪದವನ್ನು ನಾನು ಇಲ್ಲಿ ಹೇಳುವುದಿಲ್ಲ. ಎಷ್ಟು ಜನ ಸವಾರಿ ಮಾಡುವ ಗಂಡಂದಿರು ? ಇವತ್ತು ರಿಲೀಫ್ ವರ್ಕ್ಸ್‌ಗೆ ಸುಮಾರು 60-63 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮತ್ತೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕೋ ಆರ್ಡಿನೇಷನ್ ಆಫೀಸರನ್ನು ಮಾಡಿದ್ದಾರೆ. ಇವತ್ತಿನ ದಿವಸ ಇಂಜಿನಿಯರ್‌ಗೆ ಏನು ಅಧಿಕಾರವಿದೆ ? ಇವತ್ತು ನೀವು ಏನು ಇನ್ಸ್‌ಪೆಕ್ಷನ್ ಕೊಟ್ಟಿದ್ದೀರಿ ? ಇವತ್ತು ನೀವು ಎಷ್ಟು ಪೀಸ್ ವರ್ಕ್ ತೆಗೆದುಕೊಂಡಿದ್ದೀರಿ ? ನಾನು ಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ, ಇವತ್ತಿನ ವರೆಗೂ ನಿಮ್ಮ ಇನ್‌ಸ್ಪೆಕ್ಷನ್ ಹೋಗಿಲ್ಲ, ಯಾವ ಅಧಿಕಾರಿ ಇದ್ದಾರೆ ಅವರ ಹೆಸರನ್ನು ಈ ಸಭೆಯಲ್ಲಿ ನಾನು ಹೇಳುವುದಕ್ಕೆ ತಯಾರಾಗಿಲ್ಲ. ಒಂದು ಇನ್‌ಸ್ಪೆಕ್ಷನ್‌ನ್ನು ಕಳುಹಿಸುವುದಕ್ಕೆ ಈ ಇಲಾಖೆಯಿಂದ ಆಗುವುದಿಲ್ಲ, ಈ ಇಲಾಖೆಗೆ ಈ ಸ್ಥಿತಿ ಬರಬಾರದಾಗಿತ್ತು ಆದರೆ ಇವತ್ತು ಬಂದಿರುವುದರಿಂದ ನಾಚಿಕೆಯಾಗುತ್ತಿದೆ. ನೀವು ಯಾವ ಯಾವ ಭಾಗದಲ್ಲಿ, ಯಾವಯಾವ ಜಿಲ್ಲೆಗಳಲ್ಲಿ ಪೀಸ್ ವರ್ಕ್‌ನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಿ ಹಾಗೂ ನೀವು ಕೊಡುವಂಥ ಇನ್‌ಸ್ಪೆಕ್ಷನ್ ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತಿದೆ ಎಂಬುದನ್ನು ತಿಳಿಸಿ. ಇವತ್ತು ಪಿ.ಡಬ್ಲ್ಯು.ಡಿ. ಯನ್ನು ಪರ್ಫೆಕರ್ ಆಗಿ ಡಿಪ್ಲೇಡ್ ಮಾಡಿದ್ದಾರೆ. ನಾನು ಮೊನ್ನೆ ದಿವಸ ಕ್ವೆಸ್ಚನ್ ಕ್ಲಿಯರ್ ಆಗಿ ಏನೇನು ಪ್ರಶ್ನೆಗೆ ಉತ್ತರ ಬೇಕು ಎಂಬುದನ್ನು ಬರೆದು ಕಳುಹಿಸಿದ್ದೇನೆ. What is the action taken to meet the present situation ಎನ್ನುವ ಬಗ್ಗೆ ವಿವರಣೆಯನ್ನು ಕೊಡದೇ ಹೋದರೆ ಹೇಗೆ ಆಗುತ್ತದೆ ? ನಾನು ನಿಮಗೆ ಇನ್ನು ಎರಡು ದಿವಸ ವೇಳೆ ಕೊಡುತ್ತೇನೆ. ಎಲ್ಲೆಲ್ಲಿ ಪೀಸ್ ವರ್ಕ್ ಕೆಲಸವಾಗಿದೆ ಎಂಬ ವಿವರಣೆಯನ್ನು ಈ ಸಭೆಗೆ ಕೊಡಬೇಕು. ಮತ್ತು ಎನ್.ಆರ್. ಎಷ್ಟು ವರ್ಕ್ ತೆಗೆದುಕೊಂಡಿದ್ದೀರಿ ಎಂಬುದನ್ನು ನಮಗೆ ಪ್ರಾಮಾಣಿಕವಾಗಿ ಹೇಳುತ್ತೀರಾ ? ಇವತ್ತು ನನ್ನ ಮನಸ್ಸಿನಲ್ಲಿರತಕ್ಕಂಥದನ್ನು ಹೇಳುವುದಾದರೆ, ನಿಮಗೆ ಈ ಇಲಾಖೆಯೇ ಬೇಡ. ಬಡ್ಜೆಟ್ ಪ್ರಾವಿಜನ್‌ನಲ್ಲಿ ಕೊಟ್ಟಿರತಕ್ಕಂಥ ಹಣವನ್ನು ಖರ್ಚು ಮಾಡಲಿಕ್ಕೂ ನಿಮಗೆ ಹಲವಾರು ನಜ ಸವಾರರು ಇದ್ದಾರೆಂದು ನಾನು ಹೇಳುತ್ತೇನೆ. ನಾನು ಹೇಳುತ್ತೇನೆ ನಿಮಗೆ ಜೂರುಪಾರು ಗೌರವವಿದೆ ಅದನ್ನು ಸಹ ದಯವಿಟ್ಟು ಕಳೆದುಕೊಳ್ಳಬೇಡಿ. You must vacate that place ನಿಮ್ಮ ಜಿಲ್ಲೆಯ ಅಧಿಕಾರಿಗಳು ಏನು ಹೇಳುತ್ತಾರೆಂದರೇ "ಏನಿ ದೇವೇಗೌಡರೇ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ, ನಮಗೆ ಸರ್ಕಾರದಿಂದ ಇನ್‌ಸ್ಟ್ರಕ್ಷನ್ ಬರದೇ ನಾವು ಕಾಮಗಾರಿ ಕೆಲಸಗಳನ್ನು, ಪೀಸ್ ವರ್ಕ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಅವರು ಹೇಳುತ್ತಾರೆ. ಇವತ್ತು ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಆಗಿದ್ದಿದ್ದರೆ ಎಷ್ಟರಮಟ್ಟಿಗೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಶಕ್ತಿಮೀರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಪ್ರಾಮಾಣಿಕವಾಗಿ ಹೇಳಿ. ಪ್ರಾಮಾಣಿಕವಾಗಿ ನೀವು ಮಾಡಿರತಕ್ಕಂಥ ಕೆಲಸದ ವಿವರಣೆಯನ್ನು ಕೊಡಿ. ಆ ರೀತಿ ಸರಿಯಾದ ವಿವರಣೆಯನ್ನು ಕೊಡದೇ ಹಾರಿಕೆ ಉತ್ತರವನ್ನು ಕೊಟ್ಟಿದ್ದೀರಿ. ನಿಮ್ಮಲ್ಲಿ ಇಬ್ಬರು ಚೀಫ್ ಇಂಜಿನಿಯರ್ಸ್ ಇದ್ದಾರೆ ಒಬ್ಬರು ಕಮ್ಯುನಿಕೇಷನ್ ಬಿಲ್ಡಿಂಗ್ಸ್ ಮತ್ತು ಇರಿಗೇಷನ್ ವರ್ಕ್ಸ್ ಇಂಜಿನಿಯರ್ಸ್ ಎಂದು ಇಬ್ಬರು ಇದ್ದಾರೆ. ಅವರು ಯಾವ ರೀತಿಯ ಕೆಲಸವನ್ನು ತೆಗೆದುಕೊಂಡಿಲ್ಲ. ಇವತ್ತು ನಿಮಗೆ ಚನ್ನರಾಯಪಟ್ಟಣದಲ್ಲಿ ಆಗಲೀ ಎಲ್ಲೇ ಆಗಲೀ ಕೂಲಿ ಆಳುಗಳು ಸಿಕ್ಕುವುದಿಲ್ಲವೆಂದು ಹೇಳಿದರೆ ನಾನು ನಿಮಗೆ 20-25 ಜನರನ್ನು ಸ್ಪಾಟ್‌ನಲ್ಲಿಯೇ ಕೊಡಿಸಿಕೊಡುತ್ತೇನೆ. ಆದುದರಿಂದ ನಾನು ಹೇಳುವುದು ಇಷ್ಟೇ, ಪೀಸ್ ವರ್ಕ್‌ನ್ನು ಯಾವ ಕಂಟ್ರಾಕ್ಟರ್‌ಗೂ ಕೊಡಬೇಡಿ. ನಿಮ್ಮ ಅಧಿಕಾರಿಗಳೇ ಎದುರಿಗೆ ನಿಂತು ಮಾಡಿಸಲಿ. ಇವತ್ತು ನೀವು ಹಾಸನದಲ್ಲಿ 1 ಲಕ್ಷ ಕಾಮಗಾರಿಗಾಗಿ ಖರ್ಚು ಆಗಿದೆ ಎಂದು ಹೇಳಿದಿರಿ. ನೀವು ಗುಲ್ಬರ್ಗಾದಿಂದ ತಂದಂಥ ಹಾರಿ ಪಿಕಾಸಿಗೆ ಬಾಡಿಗೆ ಕೊಡಬೇಕಾಗಿತ್ತು, ಅದನ್ನು ಕೊಟ್ಟಿದ್ದೀರಿ. 46 ಸಾವಿರ ರೂಪಾಯಿಗಳನ್ನು ನೀವು ಅದಕ್ಕೆ ಡೆಬಿಟ್ ಮಾಡಿದ್ದೀರಿ ಅಷ್ಟೇ ಹೊರತು ಅಲ್ಲಿ ಏನೂ ಕೆಲಸವಾಗಿಲ್ಲ. ಈ ರೀತಿ ನಮ್ಮನ್ನು ಸಭೆಯಲ್ಲಿ ಬೇರೆ ಮಾರ್ಗದಲ್ಲಿ ಎಳೆದು ಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಬೇಡಿ. ನಿಮಗೆ ಇನ್ನು ಎರಡು ದಿವಸ ಜೈಮ್ ಕೊಡುತ್ತೇವೆ 3ನೇ ತಾರೀಖು ಅಧಿವೇಶನ ಇರುತ್ತದೆ ಅಂದು ನೀವು ನಮಗೆ ಪೂರ್ಣ ವಿವರಣೆಯನ್ನು ಕೊಡಬೇಕು. ನಮಗೆ ಇದರಲ್ಲಿ ಬಹಳ ಕಾತುರತೆ ಇದೆ, ಮತ್ತು ಮಾನ್ಯ ನಮ್ಮ ಸ್ನೇಹಿತರು ನನ್ನ ಮೇಲೆಯೇ ಆಪಾದನೆ ಮಾಡುತ್ತಿದ್ದಾರೆ. ಆದುದರಿಂದ ತಾವು ಮುಂದಿನ ತಿಂಗಳು 3ನೇ

(ಶ್ರೀ ಟಿ. ತಾರೇಗೌಡ)

ತಾರೀಖು ಪೂರ್ಣ ವಿವರಣೆಯನ್ನು ಕೊಟ್ಟರೆ ಸರಿ, ಇಲ್ಲದೇ ಹೋದರೆ ವಿರೋಧ ಪಕ್ಷದವರು ಏನು ಒಂದು ಥೋರಣೆಯನ್ನು ತಾಳಿ ಏನು ಕೆಲಸವನ್ನು ಮಾಡಬೇಕೋ ಆ ಕೆಲಸವನ್ನು ಮಾಡಬೇಕಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಮಾನ್ಯ ಸಭಾಧ್ಯಕ್ಷರೇ, ಸರ್ಕಾರದವರು ಸಾಕಷ್ಟು ಗಂಭೀರವಾದ ಉತ್ತರವನ್ನು ಕೊಟ್ಟಿದ್ದಾರೆ. ಹಾಸನ, ಕೋಲಾರ, ಶಿವಮೊಗ್ಗ ವಿಭಾಗಗಳು ಒಂದೇ ಅಲ್ಲಾ, ಎಲ್ಲಾ ಕಡೆಯಲ್ಲಿಯೂ ಸರ್ಕಾರದವರು ತಾಳಿರುವಂಥ ನಿರ್ಲಕ್ಷ್ಯ ಮನೋಭಾವನೆಯನ್ನು ನೋಡಿದರೆ ನಮ್ಮ ಸರ್ಕಾರ ದಿವಾಳಿ ಎದ್ದಿರುವಂಥ ಅನುಮಾನ ಬರುತ್ತಿದೆ. ಒಂದು ವೇಳೆ ದಿವಾಳಿ ದಿಕ್ಕಿನಲ್ಲಿ ನಮ್ಮ ಸರ್ಕಾರ ಹೋಗುತ್ತಿದ್ದರೆ ಅವನ್ನಾದರೂ ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಲಿ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಚನ್ನಬಸಪ್ಪನವರು ತಮ್ಮ ಕೆಲಸಕಾರ್ಯಗಳನ್ನು ಎಷ್ಟರ ಮಟ್ಟಿಗೆ ಮಾಡುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಬಜೆಟ್ಟಿನಲ್ಲಿ ದುಡ್ಡು ಕಡಿಮೆಯಾಗಿರುವುದು ಒಂದು ಕೊರತೆ. ಸ್ಪಿರ್ ಓವರ್ ವರ್ಕ್ಸ್ ಬಹಳ ಇವೆ. ಲೆಟರ್ ಆಫ್ ಕ್ರೆಡಿಟ್ ಕೊಡುತ್ತಾ ಇರುವುದು ನರಿಯಾಗಿಲ್ಲ, ಅಲ್ಲದೆ ಇರಾಖೆಯಲ್ಲಿ ಡ್ಯೂಯಲ್ ಕಂಟ್ರೋಲ್ ಇದೆಯೆನ್ನುವುದು ನಮ್ಮ ಗಮನಕ್ಕೆ ಬಂದಿವೆ. ಫಿನಾನ್ಸ್ ಮಿನಿಸ್ಟರ್ ಉತ್ತರ ಹೇಳುವಾಗ ಬಜೆಟ್ಟಿನಲ್ಲಿ ಇಲ್ಲದಿರುವ ಕೆಲಸಗಳನ್ನು ತೆಗೆದುಕೊಳ್ಳಲಿ, ಯಾವ ವರ್ಕ್ಸ್ ಬೇಕಾದರೂ ತೆಗೆದುಕೊಳ್ಳಲಿ ಲೆಟರ್ ಆಫ್ ಕ್ರೆಡಿಟ್ ಕೊಡುತ್ತೇವೆಂದು ಹೇಳುತ್ತಾರೆ. ಲೆಟರ್ ಆಫ್ ಕ್ರೆಡಿಟ್ ಒಂದು ಹರ್ಡ್ಲ್ ಇದರಿಂದ ಮಾಡಿರುವ ಕೆಲಸಗಳಿಗೆ ದುಡ್ಡು ಕೊಡುವುದಕ್ಕಾಗುವುದಿಲ್ಲ, ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಅಕ್ಯುಯರ್ ಪೊಜಿಷನ್ ಅನ್ನು ತಾವು ಹೇಳಬೇಕು. Letter of credit has become a great burden ಇದಕ್ಕೆ ಏನು ಸಮಜಾಯಿಷಿ ಹೇಳುತ್ತೀರೋ ಹೇಳಿ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಮದುವೆಯನ್ನು ಮಾಡಿಕೊಂದರೆ ಆಗುವುದಿಲ್ಲ, ಸೀರೆಯನ್ನೂ ತಂದು ಕೊಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಆಯಾ ಭಾಗದಲ್ಲಿರತಕ್ಕ ಪರಿಸ್ಥಿತಿಯನ್ನು ನನಗೆ ತಿಳಿಸಿದರು. ನಾನು ಪ್ರತಿ ತಾಲ್ಲೂಕ್ ನಲ್ಲಿ, ಪ್ರತಿ ಹೋಬಳಿಯಲ್ಲಿ ಏನು ಏನು ಪರಿಸ್ಥಿತಿ ಇದೆ ಎನ್ನತಕ್ಕದ್ದನ್ನು ಇಲ್ಲಿ ತಿಳಿಸಿಲ್ಲ. ಒಂದು ಸಾರ್ವತ್ರಿಕವಾದಂಥ ಚಿತ್ರವನ್ನು ಜಿಲ್ಲಾಧಿಕಾರಿಗಳು, ಯಾವ ಯಾವ ಸ್ಥಿತಿ ಅಲ್ಲಲ್ಲಿ ಇದೆಯೆನ್ನುವುದನ್ನು ಕೊಟ್ಟಿದ್ದಾರೆ. ಅದನ್ನೇ ನಾನು ಕೊಟ್ಟಿದ್ದೇನೆ. ಅಂದಾಕ್ಷಣ, ತಾವು ಹೇಳಿರತಕ್ಕದ್ದು ಸರಿಯಿಲ್ಲ ಎಂದು ಹೇಳುವಷ್ಟು ದೂರ ನಾನು ಹೋಗುವುದಿಲ್ಲ. ಪರಿಸ್ಥಿತಿ ಏನಾಗಿದೆಯೆಂದರೆ, ಉತ್ತರ ಕರ್ನಾಟಕದಲ್ಲಿ ಇದಂಥ ಪರಿಸ್ಥಿತಿಯಲ್ಲಿ ಇದು. ಇದು ಏನಾಗಿದೆಯೆಂದರೆ, ಮೊಟ್ಟ ಮೊದಲು ಕೆಲವು ಭಾಗದಲ್ಲಿ ಅತಿವಾಯಕವಾದ ಮಳೆ ಬಂತು, ಮತ್ತೆ ಏಕದಂ ಇದ್ದಕ್ಕಿದ್ದ ಹಾಗೆ ಅಲ್ಲಲ್ಲಿ ಮಳೆ ನಿಂತಿದೆ. ಮತ್ತು ಗಾಬರಿಯಾಗತಕ್ಕ ಸ್ಥಿತಿಗತಿಗಳು ಬಂದುವು. ಕೆಲವು ಕಡೆಗಳಲ್ಲಿ ಬೆಳೆಗಳೆಲ್ಲಾ ನಾನು ನೋಡಿದ್ದರಲ್ಲಿ ಹೋದ ವರ್ಷ ಹಾಸನ ಜಿಲ್ಲೆಯಲ್ಲಿ ರಾಗಿ ಹೋಯಿತು, ಮೈಸೂರು ಜಿಲ್ಲೆಯಲ್ಲಿ ಕೆಲವು ಭಾಗದಲ್ಲಿ ಅಲೂಗಡ್ಡೆ ಹೋಯಿತು, ಜೋಳ ಹೋಯಿತು. ನಾನು ಅಲ್ಲಿಗೆ ಹೋದ ಕಾಲದಲ್ಲಿ ಬಿತ್ತನೆ ಮಾಡಲಿಕ್ಕೆ ಇನ್ನೂ ಸ್ವಲ್ಪ ಮಳೆಗಾಲ ಇತ್ತು. ಆದರೆ ಗುಲ್ಬರ್ಗದಲ್ಲಿ ಅದಂಥ ಭೀಕರ ಸ್ಥಿತಿ ಆಗಿಲ್ಲ. ಕೆಲವು ದಿವಸ ಆಶೆಯನ್ನುಂಟು ಮಾಡುತ್ತದೆ, ಮತ್ತೆ ಕೆಲವು ದಿವಸ ಮಳೆಯೇ ಹೋಗುತ್ತದೆ, ಹೀಗಾಗಿ, ಕೆಲವು ಪಾಕೆಟ್ಸ್‌ಗಳಲ್ಲಿ ಬಹಳ ಕಷ್ಟ ಸ್ಥಿತಿ ಬಂದಿದೆ. ಆದ್ದರಿಂದ ಈಗ ನಾವು ಅದಕ್ಕೆ ಪರಿಹಾರ ಕೊಡಬೇಕಾದದ್ದು ಸರ್ಕಾರದ ಕರ್ತವ್ಯ ಇವೆ. ತಾವೆಲ್ಲರೂ ಹೇಳಿದ್ದೀರಿ ಮಾನ್ಯ ದೇವೇಗೌಡರೂ ಹೇಳಿದ್ದಾರೆ. ಅವರು ಕರಿಣವಾಗಿ ನನ್ನನ್ನು ಚುಚ್ಚಿದರೂ ಕೂಡ ಅದು ನನ್ನನ್ನು ಹೆಚ್ಚು ಮುತುವರ್ಜಿಯಿಂದ ಕೆಲಸ ಮಾಡಲಿ ಎಂದು ಪ್ರೇಮದಿಂದ ಹೇಳಿದ್ದಾರೆಯೇ ವಿನಹ ಮತ್ತೆ ಏನೂ ಇಲ್ಲವೆಂದು ನಾನು ಹೇಳುತ್ತೇನೆ. ನಾನು ಮುತುವರ್ಜಿಯಿಂದ ಕೆಲಸ ಮಾಡಬೇಕು, ಚೆನ್ನಾಗಿ ಕೆಲಸಗಳು ನಡೆಯಬೇಕು ಎನ್ನುವುದೇ ವಿನಹ ನಾನು ಮಂತ್ರಿ ಪದವಿಯನ್ನು ಬಿಟ್ಟುಬಿಡುವುದಲ್ಲ. ನಾನು ಪದವಿಯನ್ನು ಬಿಡುವುದರಿಂದ ಎಲ್ಲಾ ಕಾರ್ಯಗಳು ಪರಿಹಾರವಾಗುವುದಾದರೆ ಈ ಘಳಿಗೆಯಲ್ಲಿ ಬಿಟ್ಟುಕೊಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಿಮ್ಮ ಪಕ್ಷದವರಿಗೆ ಕೆಲವರಿಗೆ ಪರಿಹಾರವಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರ ಬಗ್ಗೆ ನಾನು ಇನ್ನೂ ಹೆಚ್ಚಿನ ಗಮನ ಕೊಟ್ಟು ಪರಿಹಾರ ಕಾರ್ಯ ತೃಪ್ತಿಕರವಾಗಿ ಮಾಡಬೇಕು ಎನ್ನುವುದು ಅವರ ಮೂಲ ಉದ್ದೇಶ ಇದರಲ್ಲಿ ನನ್ನ ಅಡ್ಡಿಯಿಲ್ಲ. ಮತ್ತೆ ಎಲ್ಲರೂ ಹೇಳಿದಂಥ ವಿಚಾರಗಳ ಬಗ್ಗೆ ನಾನು ಹೇಳಲಿಕ್ಕೆ ಈಗ ಸಮಯ ಯಾವಿಲ್ಲ.

ಅಧ್ಯಕ್ಷರು.—ಕೆಲವರಿಗೆ ಮಾತನಾಡುವುದಕ್ಕೆ ಆಗದೇ ಇರಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನಿಜ. ಗುಂಡ್ಲುಪೇಟೆ ಕ್ಷೇತ್ರದ ಬಗ್ಗೆ ಮಾತನಾಡುವವರು ಇಲ್ಲ. ನಾನು ಅವರ ಪರವಾಗಿ ಮಾತನಾಡುತ್ತೇನೆ. ಅಲ್ಲಿಯ ಸ್ಥಿತಿ ಉತ್ತಮವಾಗಿಲ್ಲ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ಸದಸ್ಯರುಗಳು ಹೇಳಿರುವ ವಿಷಯಗಳು ವಾಸ್ತವ ವಾದುವು. ಯಾವುದಲ್ಲಿಯೂ ದುರುದ್ದೇಶ ಇಲ್ಲ. ಪಿ. ಡಬ್ಲ್ಯೂ. ಡಿ. ಕೋಡ್ ನಲ್ಲಿ ಇರತಕ್ಕ method of work ಏನು ಇದ್ದಾವೆ ಅವರ ಪ್ರಕಾರ ನಾಮಿನಲ್ ರೋಲ್‌ನಲ್ಲಿ, ಇಲ್ಲವೇ ಪೀಸ್ ವರ್ಕ್‌ನಲ್ಲಿ ಕೆಲಸಗಳನ್ನು ಕೊಡುವ ಅವಕಾಶ ಇವೆ, ಟೆಂಡರ್ ಕಾಲ್‌ಫಾರ್ ಮಾಡಿ ಕೊಡುವ ಅವಕಾಶ ಇದೆ. ಕೆಲಸಗಳನ್ನು ಪೀಸ್ ವರ್ಕ್ ಮೇಲೆ ಮಾಡಿ ಎಂದು, ಅವಶ್ಯಕವಿದ್ದರೆ, ನಾಮಿನಲ್ ರೋಲ್ ಮೇಲೆ ಮಾಡಿ ಎಂದು ಹೇಳಿ ಇನ್‌ಸ್ಟ್ರಕ್ಷನ್ಸ್ ಕೊಟ್ಟು ಬಂದಿದ್ದೆ, ನಿಜ. ಮೊನ್ನೆ ಹಣಕಾಸಿನ ಮಂತ್ರಿಗಳು ಹೋದಾಗ ಅವರು ಒಂದು ಅಭಿಪ್ರಾಯದಿಂದ ಕೆಲಸ ಮಾಡುವವರಿಗೆ ದುಡ್ಡು ನೇರವಾಗಿ ಹೋಗಲಿ ಎಂದು, ಮತ್ತು ಮಧ್ಯವರ್ತಿ ಜನರನ್ನು ತಪ್ಪಿಸಬೇಕು ಎನ್ನುವ ಆಧಾರದ ಮೇಲೆ ನಾಮಿನಲ್ ರೋಲ್ ಮಾಡುವುದು ಒಳ್ಳೆಯದು ಎಂದು ಹೇಳಿದ್ದಾರೆ. ಆದರಲ್ಲಿ ಕೆಲವು ತೊಂದರೆಗಳೂ ಇವೆ. ಜನ ಇವಶ್ಯ ಕೆಲಸಗಳಿಗೆ ಹೋಗಬೇಕಾದರೆ, ಒಂದು ಊರಲ್ಲಿ 4 ದಿವಸ, 3 ದಿವಸದ ಕೂಲಿಯನ್ನು ಅಡ್ವಾನ್ಸ್ ತೆಗೆದುಕೊಂಡು ಕೆಲಸಗಳಿಗೆ ಹೋಗಬೇಕಾದ ಪರಿಸ್ಥಿತಿ ಬರುತ್ತದೆ ನಾಮಿನಲ್ ರೋಲ್‌ನಲ್ಲಿ ಅಡ್ವಾನ್ಸ್ ಕೊಡುವುದಕ್ಕಾಗುವುದಿಲ್ಲ. ಎಲ್ಲಾ ವಿಧಾನಗಳಲ್ಲಿಯೂ ಬೇಕಾದಷ್ಟು ಲೋಪದೋಷಗಳು ಇವೆ. ಆದ್ದರಿಂದ ನಾನು ಇದರ ಯೋಗ್ಯಾಯೋಗ್ಯತೆಯ ಬಗ್ಗೆ ಪರೀಕ್ಷೆ ಮಾಡುವುದಿಲ್ಲ. As a Public Works Minister for over a number of years, I am fully conversant with the deficiences of both systems. ಈ ವಿಚಾರಗಳನ್ನು ತಾವು ನನ್ನ ಗಮನಕ್ಕೆ ತಂದು ಕೊಟ್ಟ ಮೇಲೆ 14 ನೇ ತಾರೀಖಿ ದಿವಸ ನಾನು ಅಧಿಕಾರಿಗಳಿಗೆ ಇನ್‌ಸ್ಟ್ರಕ್ಷನ್ಸ್ ಇಷ್ಯೂ ಮಾಡಿದ್ದೇನೆ. ಚೀಫ್ ಇಂಜನಿಯರ್‌ಗೆ ಹೇಳಿದ್ದೇನೆ.

Sri H.D. DEVEGOWDA.—The Special Secretary for P.W.D. has not sent instructions. He is competent to issue instructions.

Sri H.M. CHANNABASAPPA.—No.

Sri H.D. DEVEGOWDA.—That is why the officer has not implemented the instructions issued by the P.W.D. Secretary to take up any work on piece work system. That is why I said that the P.W.D. is vertically divided.

Sri H.M. CHANNABASAPPA.—The Special Secretary hasno authority to issue instructions as to how the work is to be done under the P.W.D. Code and it is only the Government in the P.W.D. Secretariat which has got that authority.

ಶ್ರೀ ಕೆ. ಎಚ್. ಹನುಮೇಗೌಡ.—ಇದೆಲ್ಲಾ ಇತ್ಯರ್ಥವಾಗುವುದರೊಳಗೆ ಆ ಬಡಪಾಯಿಗಳ ಗತಿ ಏನಾಗುತ್ತದೆ ?

11-00 A.M.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಮೇಲೆ ಚೆಲಪ್ಪೀನ್ ಮಾಡಿ I had instructed those people to take up the works either on piece work or on contract whichever is convenient in the locality. The idea is that as many people as are in need of the work get the benefit out of it.

ಶ್ರೀ ಎಂ. ವೆಂಕಟ ಲಿಂಗಯ್ಯ.—ಮೈಸೂರು ಜಿಲ್ಲೆಯಲ್ಲಿ ಕೆಲಸವೇ ಆಗಿಲ್ಲ, ಅಲ್ಲಿ ಈ ಕೆಲಸಕ್ಕೆ ಯಾರೂ ಬರುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡು ಕಾರಣಗಳಿಂದ ಕೆಲಸಕ್ಕೆ ಜನರು ಬಾರದೆ ಇರಬಹುದು. ಮಳೆ ಸ್ವಲ್ಪ ಬಂದುದರಿಂದ ಕೆಲವರು ವ್ಯವಸಾಯದ ಕೆಲಸಕ್ಕೆ ಹೋಗಿರಬಹುದು. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ನಮ್ಮಾರು 25 ಸಾವಿರ ಜನರು ಕೆಲಸಕ್ಕೆ ಬರಲು ಸಿದ್ಧವಾಗಿದ್ದಾರೆಂದು ದೇವೇಗೌಡರು ಹೇಳಿದ್ದಾರೆ. ನಾನೀ ದಿವಸ ಸ್ಪಷ್ಟವಾಗಿ ಹೇಳುತ್ತಲಿದ್ದೇನೆ, 25 ಸಾವಿರ ವಲ್ಲ ಇನ್ನೂ 4 ಸಾವಿರ ಜನರು ಹೆಚ್ಚಾಗಿ ಬಂದರೂ ಅವರಿಗೆ ಕೆಲಸ ಕೊಡಿಸುವ ಜವಾಬ್ದಾರಿ ನನ್ನದು. ಜನರಿಗೆ ಕೆಲಸ ಕೊಡದಿದ್ದರೆ ಅವರು ಜೀವನ ಮಾಡುವ ಬಗೆ ಹೇಗೆ? ಹಣಪ್ಪಂಡೇ ಕ್ರೈಟೀರಿಯ ಅಲ್ಲ, ಜನಜೀವನಕ್ಕೆ ಕೂಡ ಬೆಲೆ ಕೊಡಬೇಕಾಗಿದೆ. ಗುಲ್ಬರ್ಗ ಮತ್ತು ಬೆದರ ಜಿಲ್ಲೆಗಳಲ್ಲಿ ನಾನು ಮತ್ತು ವಿರೋಧ ಪಕ್ಷದ ನಾಯಕರು ಹೋದಾಗ ಎಷ್ಟು ಪ್ರಮಾಣದಲ್ಲಿ ತೀವ್ರ ಆಜ್ಞೆ ಮಾಡಿ ವ್ಯವಸ್ಥೆ ಮಾಡಲಾಗಿತ್ತೋ ಇದೇ ರೀತಿಯಲ್ಲಿ ಮಾಡಲಾಗುವುದು, ಇದರ ಬಗ್ಗೆ ತೀವ್ರತೆಯಿಲ್ಲವೆಂದು ತಿಳಿಯಬಾರದು.

ಶ್ರೀ ಕೋಣಂದೂರು ಲಿಂಗಪ್ಪ.—ಏನು ಮಾಡುತ್ತಿದ್ದೀರೆಂಬುದನ್ನು ತೋರಿಸಿಕೊಡಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾರ್ಮಲ್ ಬಜೆಟ್ ಅಲ್ಲದೆ ಹೆಚ್ಚುವರಿ ಕಾಮಗಾರಿಗಳಿಗೆ ಎಷ್ಟು ಹಣ ಸರಕಾರ ಕೊಟ್ಟಿದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಇದು ಮುಖ್ಯವಾದದು. ನುಮ್ಮನೆ ಹೇಳಿದರೆ ಪ್ರಯೋಜನವಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಲೋಕಲ್ ಜನರಿಂದ ಹೆಚ್ಚು ಒತ್ತಡ ಬಂದರೆ ಬಜೆಟ್ಟಿನಿಂದ ಲಾಗಲಿ ಅಥವ 64 ಫ್ಯಾಮಿನ್ ವಾರಿನಿಂದಾಗಲಿ ಹುತ್ತದಲ್ಲಿದ್ದರೂ ಹಣ ತಂದು ಕೊಡುತ್ತೇವೆ. ನಿನ್ನೆ ತೀರ್ಮಾನ ಮಾಡಿದ್ದೇವೆ, ಹಳ್ಳಿಗಳಲ್ಲಿ ಪ್ರತಿಯೊಂದು ಕಡೆಯೂ ಕೆಲಸ ಸಿಕ್ಕುವುದು ಕಷ್ಟ, ಬಜೆಟ್ ಕೆಲಸ ಕೆಲವು ಪಾಕೆಟ್ಟಿನಲ್ಲಿರುವುದು, ಕೇವಲ ನಾರ್ಮಲ್ ಪ್ರಾವಿಷನ್ ಇರುವುದು, ಹೆಚ್ಚು ಖರ್ಚು ಮಾಡಲು ತೊಂದರೆಯಿದೆ. ತಾಲ್ಲೂಕಿನಲ್ಲಿ ಒಂದು ಕೆರೆ ಒಂದು ಮೂಲೆಯಲ್ಲಿದ್ದರೆ ಅಲ್ಲಿಗೆ ಎಲ್ಲರೂ ಹೋಗುವುದು ಕಷ್ಟ. ಹಾರಂಗಿ ಮತ್ತು ಹೇಮಾವತಿ ಯೋಜನೆಗಳಿಗೆ ಸಂಬಂಧಪಟ್ಟ ಚಾನಲ್ಲುಗಳ ಕೆಲಸವನ್ನೆಲ್ಲಾ ಪ್ರಾರಂಭಿಸಬೇಕೆಂದು ಕಟ್ಟಾಜ್ಞೆ ಮಾಡಲಾಗಿದೆ. ಹಳ್ಳಿಗಳ ರಸ್ತೆ ಕೆಲಸ ದೊರಲ್ ಕಮ್ಯೂನಿಕೇಷನ್ ಕೆಲಸ ಪ್ರಾರಂಭಿಸಿದರೆ ಅಲ್ಲಿನ ಜನರು ಕೆಲಸಕ್ಕೆ ಬರಲು ಅನುಕೂಲವಾಗುವುದು ಎಂದು ಅದರ ಬಗ್ಗೆ ವಿಶೇಷ ಪ್ರಯತ್ನ ಮಾಡಿದ್ದೇವೆ. ಒಂದು ಕೋಟಿ ರೂಪಾಯಿಗಳನ್ನು ಇದಕ್ಕೆ ರೀಅರೇಂಜ್‌ಮೆಂಟ್ ಮಾಡಿ ಒದಗಿಸಿದೆ. ಇದಕ್ಕೆ ವ್ಯವಸ್ಥೆ ಮಾಡುವುದಲ್ಲದೆ ಯಾವ ಯಾವ ಪಾಕೆಟ್ಟಿನಲ್ಲಿ ಒತ್ತಡ ಜಾಸ್ತಿಯಿದೆ ಅಲ್ಲಿ ಜನರಿಗೆ ತೊಂದರೆಯಾಗದ ಹಾಗೆ ವ್ಯವಸ್ಥೆ ಮಾಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ನಾನು ದೆಹಲಿಗೆ ಹೋಗಿ 2 ರಂದು ಪಾಪಸು ಬರುತ್ತೇನೆ, ಮಾನ್ಯ ಸದಸ್ಯರು ಇಲ್ಲೇ ಇರುವರು, ಈ ಮಧ್ಯೆ ಎರಡು ತಾಲ್ಲೂಕುಗಳಲ್ಲೂ ಸ್ವಲ್ಪಮಟ್ಟಿಗೆ ಕೆಲಸ ತೆಗೆದುಕೊಳ್ಳಬೇಕು, ಈಗ ಪ್ರಾರಂಭಿಸಿ ಅರ್ಧವಾಗಿರುವ ಕೆಲಸವನ್ನು ಒಂದು ನಿರ್ಧಾರಿತ ಮಟ್ಟಕ್ಕೆ ತರಲು ಹಣ ಖರ್ಚು ಮಾಡಬೇಕು ಎಂದು ಯೋಚಿಸಲಾಗಿದೆ ಮತ್ತು ಅದರ ಬಗ್ಗೆ ತೀರ್ಮಾನವಾಗಿದೆ. ಇದಕ್ಕೆ ತಕ್ಷಣ ವ್ಯವಸ್ಥೆ ಮಾಡುತ್ತೇವೆ. ನಾಗಮಂಗಲದಲ್ಲಿ ಭೀಕರ ಪರಿಸ್ಥಿತಿಯಿದೆಯೆಂದು ಹೇಳಿದರು, ಅದಕ್ಕೆ ಪರಿಹಾರ ಒದಗಿಸಲು ಪ್ರಯತ್ನ ಮಾಡೋಣ. ನುಮ್ಮನೆ ಮಾತಿನ ಘರ್ಷಣೆಯಾದರೆ ಪ್ರಯೋಜನವಾಗುವುದಿಲ್ಲ. ಕೆಲಸವಾಗಬೇಕು, ಜನರಿಗೆ ಕೆಲಸ ಸಿಕ್ಕಬೇಕು, ಕಷ್ಟ ಪರಿಹಾರವಾಗಬೇಕು. ಇದಕ್ಕೇನು ಮಾಡಬೇಕೆಂಬುದನ್ನು ಎಲ್ಲರೂ ಕೂತು ಮಾಡಬೇಕೇ ಹೊರತು ನುಮ್ಮನೆ ಗಲಾಟೆ ಮಾಡಿದರೆ ಅನುಕೂಲವಾಗುವುದಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ನಾನು ಸಿದ್ಧವಾಗಿರುವಾಗ, ವ್ಯವಸ್ಥೆ ಮಾಡುತ್ತೇನೆಂದು ಹೇಳುತ್ತಿರುವಾಗ ಉಗ್ರವಾಗಿ ಹೇಳಿದರೇನು ಮಾಡಲು ಸಾಧ್ಯ? ಹೇಗಾದರೂ ಮಾಡಿ ತಕ್ಕತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಪ್ರಿವಿಲೇಜ್ ಇಷ್ಯೂ ಬಗ್ಗೆ ಅವಕಾಶ ಸಿಕ್ಕಿಲ್ಲ.

ಅಧ್ಯಕ್ಷರು.—ನಾಳೆ ನೋಡೋಣ.